ಪಬ್ಲಿಕ್ ರಿಲೇಶನ್ಸ್. ವೃತ್ತಿ ಜೀವನವನ್ನು ಆರಂಭಿಸಿದ ಆಕಾಶವಾಣಿಯಾಗಲಿ, ನಂತರದ ಕೇಂದ್ರ ಸಾಹಿತ್ಯ ಅಕಾಡೆಮಿಯಾಗಲಿ, ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳು ಮತ್ತು ಭಾರತದ ಸಾಮುದಾಯಿಕ ಬದುಕಿನಲ್ಲಿ ಪ್ರಭಾವಶಾಲಿಯಾದ ಸ್ಥಾನ ಮತ್ತು ಪಾತ್ರವನ್ನು ನಿಭಾಯಿಸಿದಂಥವು. ಈಗ ಅವುಗಳ ಪ್ರಾಮುಖ್ಯತೆ ಮತ್ತು ಪ್ರಭಾವ ಬದಲಾಗಿರಬಹುದು. ಆದರೆ, ನಾನು ಅವುಗಳ ಉಚ್ಛ್ರಾಯ ಸ್ಥಿತಿಯಲ್ಲಿ ಅವುಗಳನ್ನು ಕಂಡಿದ್ದೇನೆ. ಕರ್ನಾಟಕದ ಮತ್ತು ಭಾರತದ ಸಾಂಸ್ಕೃತಿಕ ಚಲನೆಗಳು, ಆಗುಹೋಗುಗಳ ಜೊತೆ ಗಾಢವಾದ ಸಂಬಂಧವನ್ನು ನಾನು ಕಟ್ಟಿಕೊಂಡಿದ್ದೇ ಈ ಸಂಸ್ಥೆಗಳ ಮೂಲಕ.

**◆ ನಿಮ್ಮ ವಿದ್ಯಾರ್ಥಿ ಜೀವನ ಬಹಳ ವೈಬ್ರೆಂಟ್ ಆದದ್ದು. ಕರ್ನಾಟಕ ಮತ್ತು ಭಾರತದ ಮಟ್ಟಿಗೆ ನಿರ್ಣಾಯಕವಾದ ಚಳವಳಿಗಳು, ಹೋರಾಟಗಳು ಘಟಿಸಿದ ಕಾಲಘಟ್ಟ ಅದು. ಆ ದೃಷ್ಟಿಯಿಂದ ನಿಮ್ಮ ಬದುಕಿನ ಫಾರ್ಮೆಟೀವ್ ಅನ್ನಬಹುದಾದ ಆ ಕಾಲದ ಬಗ್ಗೆ, ಅದರೊಂದಿಗಿನ ನಿಮ್ಮ ಸಂಬಂಧದ ಬಗ್ಗೆ ವಿವರವಾಗಿ ಹೇಳಿ.**

ನೀವು ಹೇಳಿದ್ದು ನಿಜ. ಭಾರತದ ಮಟ್ಟಿಗೂ ಚರಿತ್ರಾರ್ಹವಾದ ಘಟ್ಟ ಅದು. ಅನೇಕ ಚಳವಳಿಗಳು, ಬದಲಾವಣೆಗಳು ರಾಜಕೀಯವಾಗಿ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳಲ್ಲಿ ಕಾಣಿಸಿಕೊಂಡದ್ದು ಆಗ. ಪ್ರತಿಯೊಬ್ಬ ಸಾಮಾನ್ಯ ನಾಗರಿಕನೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು, ಅಗತ್ಯವನ್ನು ಅರಿತುಕೊಂಡ ಸಂದರ್ಭ ಅದು.

**◆ ಅಥವಾ ಇದನ್ನು ಹೀಗೂ, ಆಧುನಿಕ ಭಾರತಕ್ಕೆ, ಸ್ವಾತಂತ್ರ್ಯೋತ್ತರ ಭಾರತ ತನಗೆ ಏನು ಬೇಕು ಅನ್ನುವುದನ್ನು ಭಾರತವೇ ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಹುಡುಕಿದ, ಕಂಡುಕೊಂಡ ಕಾಲ ಅದು... ನೀವುಗಳೆಲ್ಲ ಒಂದು ತಂಡವಾಗಿ, ವ್ಯಕ್ತಿಗತವಾಗಿ ಇದನ್ನು ತೀವ್ರವಾಗಿ ಶೋಧಿಸಿದ ಆ ಕಾಲದ ಚಲನೆಗಳ ಬಗ್ಗೆ ಹೇಳಿ.**

ನಿಜ, ಭಿನ್ನಾಭಿಪ್ರಾಯಗಳ ಜೊತೆಗೂ ಸತ್ಯಗಳನ್ನು ಅನಾವರಣ ಮಾಡಿಕೊಳ್ಳಲು ಆಗ ಪ್ರಯತ್ನಿಸಲಾಯಿತು ಅನ್ನಬಹುದು. ಅಖಿಲ ಭಾರತದ ಮಟ್ಟದಲ್ಲಿ ಕನ್ನಡದ ಶ್ರೇಷ್ಠ ಮನಸ್ಸುಗಳು ಇದರಲ್ಲಿ ತೊಡಗಿಕೊಂಡವು. ಕುವೆಂಪು ಇರಬಹುದು, ನಂಜುಂಡಸ್ವಾಮಿ ಇರಬಹುದು. ಇವರೆಲ್ಲರೂ ಕೂಡ ಪ್ರಭುತ್ವದ ಮೈಮರೆವೆಯಿಂದ ಹುಟ್ಟಿದ ಕೆಲವು ಬೆಳವಣಿಗೆಗಳನ್ನು ವಸ್ತುನಿಷ್ಠವಾಗಿ ನೋಡಿ, ಪ್ರತಿಕ್ರಿಯಿಸುವ ಬಹಳ ದೊಡ್ಡ ಕೆಲಸ ಆಗ ನಡೆಯಿತು.

**◆ ಯಾವುದನ್ನ ನೀವು ಪ್ರಭುತ್ವದ ಮೈಮರೆವೆ ಎಂದು ಹೇಳುತ್ತಿರುವಿರೋ ಅದನ್ನು ಹೀಗೂ ನೋಡಬಹುದೇನೋ – ಯಾವೆಲ್ಲ ಸಂಗತಿಗಳು ಸ್ವಾತಂತ್ರ್ಯದ ಜೊತೆಯಲ್ಲೇ ಬಂದು ಬಿಡುತ್ತವೆ ಎಂದುಕೊಂಡಿದ್ದೆವೋ ಅವು ಬಾರದೆ, ಅವುಗಳನ್ನು ಸ್ವಾತಂತ್ರ್ಯ ಹೋರಾಟದಷ್ಟೇ ತೀವ್ರವಾದ ಹೋರಾಟದ ಮೂಲಕ ಪಡೆದುಕೊಳ್ಳಬೇಕು ಎನ್ನುವ ಅರಿವಿನ ಸಮಯ ಅದು.**

ಸ್ವಾತಂತ್ರ್ಯ ಬಂದ ಎಷ್ಟೋ ಕಾಲದವರೆಗೆ ಮತ್ತು ಅರಿವನ್ನು ಪಡೆದುಕೊಳ್ಳಬೇಕಾದ ಘಟ್ಟದವರೆಗಿನ ಅವಧಿಯನ್ನು ನಾವು ಬೇಕಾದರೆ ‘ಕೂಲಿಂಗ್ ಪೀರಿಯಡ್’ ಅನ್ನಬಹುದೇನೋ. ಅಂಥ ಅವಧಿ ಮೀರುತ್ತಿರುವ ಹೊತ್ತಿನಲ್ಲೇ ಭಾರತದ ಒಳಗೆ ಒಂದು ತಿರುವು ಉಂಟಾಯಿತು. ಆರಂಭದಿಂದಲೂ ಇದ್ದ ಎಡಪಂಥೀಯ ಚಿಂತನೆ,

